ದೃಷ್ಟಿಕೋನವನ್ನು ಬದಲಿಸಿದರು. ನಿಜಕ್ಕೂ ನನ್ನ ಕೆಲಸವನ್ನು ಯಾರಾದರೂ ಅಭಿನಂದಿಸಿದರೆ, ಸುಂದರವಾಗಿ ನೃತ್ಯ ಮಾಡುತ್ತಿ ಎಂದು ಶ್ಲಾಘಿಸಿದರೆ, ಅದಕ್ಕೆ ಗೌರಿ ಮಾ ಕಾರಣ. 'ನನ್ನ ನೃತ್ಯ ನನ್ನ ಶೈಲಿ' ಎಂಬ ವಿಶ್ವಾಸವನ್ನು ಅವರು ಮೂಡಿಸಿದರು.

**◆ ಹಾಗಾದರೆ ನಿಮ್ಮ ಬೆಂಗಳೂರಿನ ನೆನಪೆಂದರೆ ನೃತ್ಯಗ್ರಾಮದ ದಟ್ಟ ನೆನಪುಗಳು...**

ನೃತ್ಯಗ್ರಾಮದಲ್ಲಿ ನಾನು ಮರೆಯಲಾರದ ಇನ್ನೊಂದು ಅನುಭವವನ್ನು ಹೇಳಲೇಬೇಕು. ಒಮ್ಮೆ ರಾತ್ರಿ ಊಟವಾಗಿ ತುಸು ಹೊತ್ತಿನ ಬಳಿಕ ನಾನು ಇನ್ನೇನು ಮಲಗುವುದೆಂದು ಸಿದ್ಧತೆ ಮಾಡಿಕೊಂಡಿದ್ದೆ. ಅಷ್ಟರಲ್ಲಿ ಹೊರಗೆ ಜೋರು ಜೋರು ಮಳೆ ಸುರಿಯಲಾರಂಭಿಸಿತು. ಅಬ್ಬಬ್ಬಾ... ಗುಡುಗು ಮಿಂಚು ಸಹಿತ ದೊಡ್ಡ ದೊಡ್ಡ ಹನಿಯ ಮಳೆ ಬಡಿದಪ್ಪಳಿಸಿತು. ಅದನ್ನು ಮೀರಿ ಗೌರಿ ಮಾ ಅವರ ಧ್ವನಿ ಬಂತು. 'ಮಂಜರೀ... ಮಂಜರೀ.. ಬಾ ಇಲ್ಲಿ... ಹೊರಗೆ ಹೋಗಬೇಕಿದೆ' ಎಂದು. ಅರೆ ಇಷ್ಟೊಂದು ಮಳೆಯಲ್ಲಿ ಈಗ ಹೋಗುವುದಾದರೂ ಎಲ್ಲಿಗೆ ಎಂದು ವಿಸ್ಮಯಪಡುತ್ತ, ನಾನು ದಡಬಡಿಸಿ ಎದ್ದು, ಛತ್ರಿಯನ್ನು ಹುಡುಕಲಾರಂಭಿಸಿದೆ. ಮತ್ತೊಮ್ಮೆ ಅವರು ಕರೆಯುವಷ್ಟರಲ್ಲಿ ಛತ್ರಿ ಸಮೇತ ನಾನು ಬಾಗಿಲ ಬಳಿ ಬಂದೆ. ಅವರ ಪ್ರೀತಿಯ ಎರಡು ನಾಯಿಗಳೂ ಅವರೊಂದಿಗೆ ಹೊರಗೆ ಹೋಗಲು ಸಜ್ಜಾಗಿದ್ದವು. ನನ್ನ ಕೈಯ್ಯಲ್ಲಿದ್ದ ಛತ್ರಿಯನ್ನು ನೋಡಿದ ಅವರು, 'ಇದೇಕೆ... ಮಳೆ ಬರಲಿ, ನಾವು ಹೋಗೋಣ... ಬಾ' ಎನ್ನುತ್ತ ಸುರಿವ ಮಳೆಯಲ್ಲಿ ಅಂಗಳಕ್ಕೆ ಇಳಿದರು. ಆ ನಾಯಿಗಳೂ ಅವರ ಹಿಂಬಾಲಕರೇ. ಮಳೆಯ ಗೊಡವೆಯಿಲ್ಲ. ನಾನೂ ಮನಸ್ಸನ್ನು ಸಜ್ಜು ಮಾಡಿಕೊಂಡೆ. ಮಳೆಯಲ್ಲಿ ಹೆಜ್ಜೆ ಹಾಕುತ್ತ ತೊಯ್ದು ತೊಪ್ಪೆಯಾಗಿದ್ದೆವು. ಆ ಕಗ್ಗತ್ತಲ ರಾತ್ರಿಯಲ್ಲಿ ಸುರಿವ ಮಳೆಯಲ್ಲಿ ನನ್ನ ಕಿವಿಗೆ ಬಿದ್ದ ಸದ್ದುಗಳೆಷ್ಟೋ... ಗೀತವೆಷ್ಟೋ... ಅವು ನನ್ನೆದೆಯಲ್ಲಿ ಮೂಡಿಸಿದ ಭಾವಗಳೆಷ್ಟೋ ನಾನು ಲೆಕ್ಕ ಹಾಕಲಾರೆ. ಹಾಗೆ ನಡೆಯುತ್ತ ನಾವು ಟೆರೇಸಿಗೆ ಬಂದೆವು. ಅಲ್ಲಿ ಒಡಿಸ್ಸಿ ನೃತ್ಯ ಶಾಲೆಯಿತ್ತು. ಅದರ ಪಕ್ಕ ನಾವು ನಾಲ್ವರು ನಿಂತೆವು. 'ಈಗ ನಾವು ಲೇಸರ್ ಷೋ ನೋಡ್ತಿದೀವಿ...' ಎನ್ನುತ್ತ ಮುಗುಳು ನಕ್ಕರು. ಹೌದು, ಬಾನಿನಲ್ಲಿ ಮಿಂಚು



ನರ್ತಿಸುತ್ತಿತ್ತು. ಅದನ್ನು ಹಿಂಬಾಲಿಸುತ್ತ ಗುಡುಗಿನ ಸದ್ದು ಮರಳಿಮರಳಿ ಕೇಳುತ್ತಿತ್ತು. ಸಾಮಾನ್ಯವಾಗಿ ನಾಯಿಗಳಿಗೆ ನೀರೆಂದರೆ ಇಷ್ಟವಿರುವುದಿಲ್ಲ. ಮಳೆಯೆಂದರೆ ಅಷ್ಟಕ್ಕಷ್ಟೆ. ಮಿಂಚು ಗುಡುಗೆಂದರೆ ಹೆದರಿಬಿಡುತ್ತವೆ. ಆದರೆ ಇದೆಲ್ಲವನ್ನೂ ಮೀರಿ ಆ ನಾಯಿಗಳು ಗೌರಿ ಮಾ ಅವರನ್ನು ಪ್ರೀತಿಸುತ್ತಿದ್ದವು. ಅವರು ನಡೆದಲ್ಲಿ ಅವು ನಡೆಯುತ್ತಿದ್ದವು. ಅವರ ಇಕ್ಕೆಲಗಳಲ್ಲಿ ನಿಂತು, ಗುಡುಗು, ಮಿಂಚು, ಮಳೆಯನ್ನು ದಿಟ್ಟಿಸುತ್ತಿದ್ದವು. ಅಲ್ಲಿ ನಾನೂ ಇದ್ದೆ ಎನ್ನುವುದಷ್ಟೇ ನನ್ನ ಭಾಗ್ಯ. ಇಂತಹ ಅನುಭವಗಳು ಕಲಾವಿದರ ಗ್ರಹಿಕೆಯ ಗಡಿಯನ್ನು ವಿಸ್ತರಿಸುತ್ತವೆ ಎಂದು ನನಗೆ ಆ ಬಳಿಕ ಅರ್ಥವಾಯಿತು.

ನಾವು ಕಲಾವಿದರು ಅನುಭವಗಳಿಗೆ ಧುಮುಕಿಕೊಳ್ಳಬೇಕು. ಗೆರೆಗಳನ್ನು ಮೀರಿ, ಕಂಫರ್ಟ್ ಅನ್ನು ಮೀರಿ ನಡೆಯುವುದು ಕಲಿಯಬೇಕು. ಆಗಲೇ ನಮ್ಮ ವ್ಯಕ್ತಿತ್ವದಲ್ಲಿ, ವರ್ಚಸ್ಸಿನಲ್ಲಿ ವಿಶ್ವಾಸದ ಛಾಯೆಯೊಂದು ಮೂಡುತ್ತದೆ. ●